**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **182/2016**

ಸಿ.ಡಬ್ಲ್ಯೂ –6 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆಃಗಂಡ | ಃ | ಮಲ್ಲಯ್ಯ |
| ವಯಸ್ಸು | ಃ | ೪೦ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಬೋದಾ |

ದಿನಾಂಕಃ೧೯-೦೩-೨೦೨೧

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ದಿನಾಂಕ 05-10-2013 ರಂದು ಬೆಳಿಗ್ಗೆ 10 ರಿಂದ 11 ಗಂಟೆ ಸುಮಾರಿಗೆ ನಮ್ಮ ಸಮಕ್ಷಮ ಪೋಲಿಸರು 3 ಲಕ್ಷ 2 ನೂರು ರೂಪಾಯಿಗಳನ್ನು ಎಣಿಕೆ ಮಾಡಿ ಪಂಚನಾಮೆ ಜರುಗಿಸಿರುತ್ತಾರೆ. ದಿನಾಂಕ 06-10-2013 ರಂದು ಪರ್ವೆಸ್ ಕಾಲೋನಿಯಲ್ಲಿ 1,10,000/- ಗಳನ್ನು ಮತ್ತು 47 ಗ್ರಾಂ ಬಂಗಾರವನ್ನು ಬೆಳಿಗ್ಗೆ 11 ರಿಂದ 12 ಗಂಟೆ ಸುಮಾರಿಗೆ ಪಂಚನಾಮೆ ಜರುಗಿಸಿ ವಶಪಸಿಡಿಕೊಂಡಿರುತ್ತಾರೆ. ದಿನಾಂಕ 11-10-2013 ರಂದು 1 ಗಂಟೆ ಸುಮಾರಿಗೆ 20 ಸಾವಿರ ರೂಪಾಯಿಗಳನ್ನು ಎಂ.ಬಿ ನಗರ ಪೊಲೀಸ್ ಠಾಣೆಯಲ್ಲಿ ಪಂಚನಾಮೆ ಜುರಗಿಸಿ ವಶಪಡಿಸಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನನ್ನ ಮತ್ತು ಚಾಸಾ-7 ರವರ ಸಮಕ್ಷಮ ಜರುಗಿಸಿರುತ್ತಾರೆ.

ಸಾಕ್ಷಿಗೆ ಈಗ 4 ಜಪ್ತಿ ಪಂಚನಾಮೆಗಳನ್ನು ತೋರಿಸಲಾಗಿ ಅವುಗಳನ್ನು ಕ್ರಮವಾಗಿ ನಿಪಿ-10 ರಿಂದ ನಿಪಿ-13 ಎಂದು ಗುರುತಿಸಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ 10 (ಎ), 11 (ಎ),12(ಎ), 13(ಎ) ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಸ.ಸ.ಅ ರವರು ಭಾಗಶಃ ಪ್ರತಿಕೂಲ ಸಾಕ್ಷಿಯನ್ನು ಪರಿಗಣಿಸಬೇಕೆಂದು ಕೇಳಿಕೊಂಡ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಸಲಾಯಿತು**)**

**ಪಾಟೀ ಸವಾಲು ಮಾನ್ಯ ಸಸಅ ಅವರಿಂದಃ**

ದಿನಾಂಕ ೦೬-೧೦-೨೦೧೩ ರಂದು ನನ್ನ ಸಮಕ್ಷಮ ೧ ಗಂಟೆಯಿಂದ ೨ ಗಂಟೆಯವರೆಗೆ ಮಕ್ಕಾ ಮಸೀದಿ ಹತ್ತಿರ, ಹೊಸ ಬಡಾವಣೆ ಬಸವೇಶ್ವರ ಕಾಲೋನಿ ಇಲ್ಲಿ ಪಂಚನಾಮೆ ಜರುಗಿಸಿದರು ಎಂದರೆ ಸರಿ. ನಿಪಿ-೧೩ ರಂತೆ ದಿನಾಂಕ ೧೧-೧೦-೨೦೧೩ ರಂದು ೮ ರಿಂದ ೧೦ ಗಂಟೆಯ ಸಮಯದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು 3 ನೇ ಆರೋಪಿ ಪರ ಶ್ರೀ ಬಿ ಐ ಎಸ್. ವಕೀಲರಿಂದ**

ನಮ್ಮ ಊರು ಬೋದನಾ. ನಾನು ಒಕ್ಕಲುತನ ಮಾಡುತ್ತೇನೆ. ದಿನಾಂಕ 05-10-2013 ರಂದು ಯಾವ ವಾರ ಬರುತ್ತದೆಂದು ನನಗೆ ಹೇಳಲು ಬರುವುದಿಲ್ಲ. ದಿನಾಂಕ 05-10-2013 ರಂದು ನನ್ನ ಸಮಕ್ಷಮ ಪೋಲಿಸರು 3 ಲಕ್ಷ 2 ನೂರು ರೂಪಾಯಿಗಳನ್ನು ಎಣಿಸಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ಎಲ್ಲಿಂದ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ಅದು ಕಡಗಂಚಿ ಬ್ಯಾಂಕಿನಿಂದ ಕಳ್ಳತನವಾದ ಹಣವೆಂದು ಮಾಹಿತಿ ಗೊತ್ತು. ಅದರ ಮೇಲೆ ಇದ್ದ ಲೇಬಲ್ ಮತ್ತು ದಿನಾಂಕ ನನಗೆ ನೆನಪಿಲ್ಲ. ಪಂಚನಾಮೆ ಜರುಗಿಸುವ ಪೂರ್ವದಲ್ಲಿ ನಿಮಗೆ ಹೇಳಿ ಕರೆಸಿದ್ದರೋ ಅಥವಾ ನೀವೇ ಅಲ್ಲಿಗೆ ಹೋಗಿದ್ದಿರೋ ಎಂಬ ಪ್ರಶ್ನೆಗೆ ಸಾಕ್ಷಿ ನಾನೇ ಹೋಗಿದ್ದೇನೆ ಎಂದು ನುಡಿಯುತ್ತಾರೆ.

2. ಬೋದನಾದಿಂದ ಕಡಗಂಚಿ 7 ಕೀಲೊ ಮೀಟರ ಅಂತರದಲ್ಲಿದೆ. 3 ಲಕ್ಷ 2 ನೂರು ರೂಪಾಯಿಗಳನ್ನು ಎಲ್ಲಿಂದ ತಂದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ನನ್ನ ಮುಂದೆ ಎಣಿಕೆ ಮಾತ್ರ ಮಾಡಿರುತ್ತಾರೆ. ದಿನಾಂಕ 05-10-2013 ರಂದು ಸಮಯ 10 ರಿಂದ 11 ಗಂಟೆ ಸಮಯದಲ್ಲಿ ನಾನು ಪಂಚನಾಮೆ ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಮೊಬಲಗು 500 ರಿನ 600 ನೋಟುಗಳು ಇದ್ದವು. ನೂರು ರೂಪಾಯಿಗಳ 2 ನೋಟುಗಳು ಇದ್ದವು. ಸದರಿ ಮೊಬಲಗು 500 ರೂಪಾಯಿಗಳ 600 ನೋಟುಗಳು ಇದ್ದವು ಎಂದು ಮತ್ತು 100 ಗಳ 2 ನೋಟುಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆನಂತರ ನಾನು ನಮ್ಮ ಊರಿಗೆ ಹೋದೆ. 6 ನೇ ತಾರೀಖಿಗೆ ನನಗೆ ಬರಲು ಹೇಳಿದರು. 6 ನೇ ತಾರೀಖು ಯಾವ ವಾರ ಬಂದಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಮರುದಿವಸವೂ ಸಹ ನಾನೇ ಹೋದೆ.

ದಿನಾಂಕ 06-10-2013 ರಂದು ಪರ್ವೆಸ ಕಾಲೋನಿಗೆ ಕರೆದುಕೊಂಡು ಹೋದರು. ಬ್ಯಾಂಕಿನಿಂದ ನಮಗೆ ಕರೆದುಕೊಂಡು ಹೋಗಿದ್ದರು. ದಿನಾಂಕ 06-10-2013 ರಂದು ನಾನು ಪರ್ವೆಸ ಕಾಲೋನಿಗೆ ಹೋಗಿದ್ದೇನೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಪರ್ವೆಸ ಕಾಲೋನಿಯಲ್ಲಿ ಒಂದು ಮನೆಗೆ ಹೋಗಿ, 1 ನೇ ಮಹಡಿಯಲ್ಲಿ ನನ್ನೊಂದಿಗೆ ಆರೋಪಿಗಳೂ ಸಹ ಇದ್ದರು. ಆರೋಪಿಗಳು ಸದರಿ ಸ್ಥಳವನ್ನು ತೋರಿಸಿದರು. ಆರೋಪಿಗಳೊಂದಿಗೆ ಅಲ್ಲಿಗೆ ಹೋಗಿದ್ದೇವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 1 ನೇ ಮಹಡಿಯ ಬಾಗಿಲು ಉತ್ತರ ದಿಕ್ಕಿನ ಕಡೆಗೆ ಇತ್ತು, ಆ ಮನೆ ಯಾರದ್ದು ಮತ್ತು ಮನೆಯ ನಂಬರ ನನಗೆ ಹೇಳಲು ಬರುವುದಿಲ್ಲ. ಆರೋಪಿಗಳು 3-4 ಜನ ಇದ್ದರು, ಅವರ ಹೆಸರು ನನಗೆ ನೆನಪಿಲ್ಲ. ಆರೋಪಿಗಳನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ 8-10 ವರ್ಷಗಳಾಯಿತು ನನಗೆ ನೆನಪಿಲ್ಲ. ನಾನು ಹೇಳಿದಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಎಂದರೆ ಸರಿಯಲ್ಲ. ದಿನಾಂಕ 11-10-2013 ರಂದು ಎಂ.ಬಿ ನಗರ ಪೋಲಿಸ್ ಠಾಣೆಗೆ ಹೋಗಿದ್ದೇವು. ನಾನು ಕಡಗಂಚಿ ಬ್ಯಾಂಕ ವ್ಯವಸ್ಥಾಪಕರ ಜೊತೆ ಹೋಗಿದ್ದೆ. ಆ ದಿನ ಯಾವ ವಾರ ಎಂದು ಹೇಳಲು ಬರುವುದಿಲ್ಲ. ಬ್ಯಾಂಕಿನ ವ್ಯವಸ್ಥಾಪಕರ ಜೀಪಿನಲ್ಲಿ ಹೋಗಿದ್ದೇವು.

5. ಆ ಜೀಪಿನ ಸಂಖ್ಯೆ ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ ಆದಿನ ಬೋದನದಿಂದ 8 ಗಂಟೆಗೆ ಬಿಟ್ಟೆ, ಕಡಗಂಚಿಗೆ 8.30 ಸುಮಾರಿಗೆ ಕಡಗಂಚಿಗೆ ಬಸ್ಸಿನಲ್ಲಿ ಬಂದೆ. ಕಡಗಂಚಿ ಬಿಟ್ಟಾಗ ಎಷ್ಟು ಗಂಟೆಯಾಗಿತ್ತು ನನಗೆ ನೆನಪಿಲ್ಲ, ವ್ಯವಸ್ಥಾಪಕರ ಬಂದ ಮೇಲೆ ಅವರೊಂದಿಗೆ ಎಂ.ಬಿ ನಗರ ಪೋಲಿಸ್ ಠಾಣೆಗೆ ಹೋದೇವು. ಯಾವ ಮಾರ್ಗವಾಗಿ ಹೋದೇವು ನನಗೆ ಗೊತ್ತಿಲ್ಲ. ಎಂ. ಬಿ ನಗರಕ್ಕೆ 11 ಗಂಟೆ ಸುಮಾರಿಗೆ ಹೋದೇವು. ಅಲ್ಲಿ ಹೋದ ನಂತರ 2-3 ಗಂಟೆ ಅಲ್ಲಿಯೇ ಇದ್ದೇವು, ಆಗ ಅಲ್ಲಿ ಪಿ ಎಸ್ ಐ ಇರಲಿಲ್ಲ. ಅರ್ಧ ಗಂಟೆಯ ನಂತರ ಪಿ ಎಸ್ ಐ ಬಂದರು. ಅಲ್ಲಿ ಏನು ವಿಚಾರಣೆ ಮಾಡಲಿಲ್ಲ, 20 ಸಾವಿರ ರೂಪಾಯಿ ಜಪ್ತಿಪಡಿಸಿಕೊಂಡರು. 20 ಸಾವಿರ ರೂಪಾಯಿಗಳು ನಾವು ಹೋದ ಬಳಿಕ ತೋರಿಸಿದರು ಎಂದರೆ ಸರಿ.

6. 500 ರೂ. ಗಳ 40 ನೋಟುಗಳು ಇದ್ದವು. ಅವು 500 ರೂ.ಗಳ 40 ನೋಟುಗಳು ಇದ್ದವು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಯಾರು ಸಂಬಂದಪಟ್ಟ ಯಾವ ಅಧಿಕಾರಿಯು ಕರೆಸಿರಲಿಲ್ಲ ನಾವು ಸ್ಥಳಕ್ಕೆ ಆದಿನ ಹೋಗಿರಲಿಲ್ಲ ನಮ್ಮಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಬಂಗಾರ, ಒಡವೆ ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೋದ ನಂತರ ನನ್ನ ಸಮಕ್ಷಮ ತೂಕ ಮಾಡಿದ್ದಾರೆ. ನನ್ನ ಸಮಕ್ಷಮ ತೂಕ ಮಾಡಿದ್ದಾರೆ ಎಂದು ನಾನು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ನಾನು ಪೋಲಿಸ್ ಇಲಾಖೆಯವರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ಮತ್ತು 4 ನೇ ಆರೋಪಿ ಪರ ಶ್ರೀ ಬಿ ಜಿ ಬಿ ವಕೀಲರಿಂದ**

ನನಗೂ ಮತ್ತು ಪೋಲಿಸರಿಗೆ ಮತ್ತು ಬ್ಯಾಂಕಿನ ವ್ಯವಸ್ಥಾಪಕರಿಗೆ ಯಾವುದೇ ಪರಿಚಯವಿಲ್ಲ. ನಾನು ಕಡಗಂಚಿ ಬ್ಯಾಂಕಿನಲ್ಲಿ ಖಾತೆ ಹೊಂದಿದ್ದೇನೆ ಸದರಿ ಖಾತೆ ನಂ. ನನಗೆ ನೆನಪಿಲ್ಲ. 15 ತೊಲೆ ಬಂಗಾರದ ಸಮಾನುಗಳನ್ನು ನಾನು ಬ್ಯಾಂಕಿನಲ್ಲಿ ಇಟ್ಟಿದ್ದೆ, ಹಣ ಇಟ್ಟಿರಲಿಲ್ಲ. ನಾನು ಈ ಮಾಹಿತಿಯನ್ನು ತನಿಖಾಧಿಕಾರಿಗೆ ಹೇಳಿಲ್ಲ. ಬಂಗಾರದ ಕಳ್ಳತನವಾದ ನಂತರ ಮ್ಯಾನೇಜರ ರವರು ನಿಮ್ಮದು ಯಾರ ಯಾರದ್ದು ಬಂಗಾರ ಕಳ್ಳತವಾಗಿದೆಯೋ ಅವರು ಚೀಟಿಯನ್ನು ತಂದುಕೊಡುವಂತೆ ಹೇಳಿದ್ದರು. ನಾನು ಚೀಟಿ ತೆಗೆದುಕೊಂಡು ಹೋಗಿ ಕೊಟ್ಟೆ. ನನಗೆ ಯಾವ ಯಾವ ಸಮಾನುಗಳು ಎಷ್ಟೇಷ್ಟು ಇದ್ದವು ಎಂದು ನನಗೆ ನೆನಪಿಲ್ಲ.

2. ನನಗೆ ಇನ್ನೂ ಬಂಗಾರ ಕೊಟ್ಟಿಲ್ಲ. ಪೋಲಿಸರು ನನಗೆ ಯಾವಾಗಲೂ ಎಲ್ಲಿಯೂ ಕರೆದಿಲ್ಲ ಎಂದರೆ ಸರಿ. ಜಪ್ತಿಪಡಿಸಿಕೊಂಡ ಸ್ಥಳಗಳ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಕಡಗಂ, ಬ್ಯಾಂಕಿನಲ್ಲಿ, ಎಂ.ಬಿ ನಗರದಲ್ಲಿ ಸಹಿ ಮಾಡಿದ್ದೇನೆ. ಎಷ್ಟು ಸಹಿ ಮಾಡಿದ್ದೇನೆ ನನಗೆ ನೆನಪಿಲ್ಲ. ನನ್ನ ಜೊತೆಯಲ್ಲಿ ನನ್ನ ಗೆಳೆಯ ಪ್ರಕಾಶ ಚಂದ್ರಶಾ ಎಂಬುವವರು ಸಹಿ ಮಾಡಿದ್ದಾರೆ. ನಮ್ಮೊಂದಿಗೆ ಸುಮಾರು ಅಂದಾಜು 40-50 ಜನ ಕಡಗಂಚಿ ಬ್ಯಾಂಕಿನಲ್ಲಿ ಇದ್ದರು. ನನ್ನನ್ನು ಮತ್ತು ನನ್ನ ಗೆಳೆಯನನ್ನು ಬಿಟ್ಟು ಪೋಲಿಸರು ಬೇರೆಯವರ ಸಹಿ ಪಡೆದಿದ್ದಾರೆ. ಅವರು ಎಷ್ಟು ಸಲ ಪಡೆದಿದ್ದಾರೆ, ಯಾರ ಯಾರ ಸಹಿ ಪಡೆದಿದ್ದಾರೆ ನನಗೆ ಗೊತ್ತಿಲ್ಲ, ಜನರ ಸಹಿ ಪಡೆದಿದ್ದಾರೆ.

3. ಸದರಿ ನೋಟುಗಳ ಪ್ರಾರಂಭಿಕ ಕ್ರಮ ಸಂಖ್ಯೆ ಮತ್ತು ಕೊನೆಯ ಕ್ರಮ ಸಂಖ್ಯೆ ನನಗೆ ಗೊತ್ತಿಲ್ಲ. ಪೋಲಿಸರು ನಮಗೆ ಸಹಿ ಮಾಡಲು ಹೇಳಿದರು ಅದರಂತೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಕಳ್ಳತನದ ಬಗ್ಗೆ ಗೊತ್ತು, ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ನನಗೆ ಈ ತಾರೀಖಿಗೆ ಬರುವಂತೆ ವ್ಯವಸ್ಥಾಪಕರು ಹೇಳಿದರು. ನನಗೆ ಫೋನ ಮಾಡಿ ಮ್ಯಾನೇಜರ ಕರೆಸಿದ್ದರು ಎಂದರೆ ಸರಿ. ನಾನು ಎಂ. ಬಿ ನಗರ ಪೋಲಿಸ ಠಾಣೆಗೆ ಹೊದಾಗ ಪೋಲಿಸರು ಇದ್ದರು ಮತ್ತು ಬ್ಯಾಂಕ ಕಳ್ಳತನ ಮಾಡಿರುವ ಕಳ್ಳರು ಇದ್ದರು. ಕಳ್ಳತನ ಮಾಡಿರುವವರ ಹೆಸರು, ಅವರು ಯಾರು ಅವರು ಎಲ್ಲಿಯವರು ಎಂದು ನನಗೆ ಗುರುತಿಸಲು ಆಗುವುದಿಲ್ಲ. ಪೋಲಿಸರಿಗೂ ಬ್ಯಾಂಕ್ ವ್ಯವಸ್ಥಾಪಕರಿಗೂ ನನಗೂ ಪರಿಚಯವಿದೆ ಹಾಗಾಗಿ ಅವರು ಎಲ್ಲಿ ಸಹಿ ಮಾಡಲು ಹೇಳಿದರು ಅಲ್ಲಿ ಬ್ಯಾಂಕಿನಲ್ಲಿ ಕುಳಿತು ಸಹಿ ಮಾಡಿದ್ದೆನೆ ಎಂದರೆ ಸರಿಯಲ್ಲ. ನಾವು ಪಂಚನಾಮೆ ಮೇಲೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಹಣ, ಬಂಗಾರ ಜಪ್ತಿಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.